ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ./19/2016-17 ದಿನಾಂಕ: 19/08/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| ಕಾರಟಗಿ ರತ್ನಮ್ಮ ತಾಯಿ ದಿವಂಗತಳು ಹನುಮಂತಮ್ಮ ಕೂರಿಗನೂರು ಗ್ರಾಮ ಸಿರುಗುಪ್ಪ ತಾಲೂಕು | ಶ್ರೀದೇವಿ ತಂದೆ ದಿವಂಗತ ಅಂಜಿನಮ್ಮ ಕೂರಿಗನೂರು ಗ್ರಾಮ ಸಿರುಗುಪ್ಪ ತಾಲೂಕು |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಕೂರಿಗನೂರು ಗ್ರಾಮ | 58/2 | 2.00 | ಹೆಚ್ 13/2011-12 | 16/2011-12 |

ಪೀಠಿಕೆ:

ಸಿರುಗುಪ್ಪ ತಾಲೂಕಿನ ಕೂರಿಗನೂರು ಗ್ರಾಮದ ಸರ್ವೆ ನಂ: 58/2 ವಿಸ್ತೀರ್ಣ:2.00 ಎಕರೆ ಜಮೀನುಗೆ ಸಂಬಂಧಿಸಿದಂತೆ ಪೋತಿ ಪಟ್ಟ ಪ್ರಕಾರ ಕೆ.ಹನುಮಂತಮ್ಮ ಗಂಡ ದಿವಂಗತ ಹನುಮಂತಪ್ಪ ಇವರಿಂದ ಕಾರಟಗಿ ರತ್ನಮ್ಮ ತಾಯಿ ದಿವಂಗತಳು ಹನುಮಂತಮ್ಮ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಶ್ರೀದೇವಿ ತಂದೆ ದಿವಂಗತ ಅಂಜಿನಪ್ಪ ಇವರು ದಿನಾಂಕ: 22-07-2011 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 22/07/2016, 05/08/2016, 19/08/2016 ಮತ್ತು 09-09-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು:

ವಾದಿಗಳಾದ ಕಾರಟಗಿ ರತ್ನಮ್ಮ ತಾಯಿ ಹನುಮಂತಮ್ಮ ಕೂರಿಗನೂರು ಇವರು ಕೂರಿಗನೂರು ಗ್ರಾಮದ ಸರ್ವೆ ನಂಬರ್ 58/2 ವಿಸ್ತೀರ್ಣ 2.00 ಜಮೀನು ಕೆ.ಹನುಮಂತಮ್ಮ ಗಂಡ ದಿವಂಗತ ಹೆಸರಿಗೆ ಪೋತಿ ಪಟ್ಟ ಬದಲಾವಣೆ ಸಂಧರ್ಭದಲ್ಲಿ ಶ್ರೀದೇವಿ ತಂದೆ ಅಂಜಿನಪ್ಪ ಕೂರಿಗನೂರು ಗ್ರಾಮ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಕಾರಟಗಿ ರತ್ನಮ್ಮ ಇವರು ದಿನಾಂಕ 05-08-2016 ರಂದು ಮಾತ್ರ ವಿಚಾರಣೆಗೆ ಹಾಜರಾಗಿರುತ್ತಾರೆ ಯಾವುದೇ ಲಿಖಿತ ದಾಖಲೆಗಳಾಗಲಿ ಹಾಗೂ ಸಂಬಂಧಪಟ್ಟ ದಾಖಲೆಗಳು ಸಲ್ಲಿಸಿರುವುದಿಲ್ಲ.

...ಗಳು

ಪ್ರತಿವಾದಿಗಳಾದ ಶ್ರೀದೇವಿ ತಂದೆ ದಿವಂಗತ ಅಂಜಿನಪ್ಪ, ಕೂರಿಗನೂರು ಗ್ರಾಮ ಇವರು ...ರಿಗನೂರು ಗ್ರಾಮದ ಸರ್ವೆ ನಂಬರ್ 58/2 ವಿಸ್ತೀರ್ಣ 2.00 ಜಮೀನು ಕೆ.ಹನುಮಂತಮ್ಮ ಗಂಡ ದಿವಂಗತ ಹನುಮಂತಪ್ಪ ಇವರಿಂದ ರತ್ನಮ್ಮ ತಾಯಿ ಹನುಮಂತಮ್ಮ ಹೆಸರಿಗೆ ಪೋತಿ ಪಟ್ಟಿ ಬದಲಾವಣೆ ಸಂಧರ್ಭದಲ್ಲಿ ದಿನಾಂಕ 22- 07-2011ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ ಸದ್ರಿ ಜಮೀನು ನನ್ನ ಅಜ್ಜಿಯವರಿಗೆ ನನ್ನ ತಂದೆಯಾದ ದಿವಂಗತ ಅಂಜಿನಿ ತಂದೆ ಹನುಮಂತಪ್ಪ ಮತ್ತು ನನ್ನ ತಂದೆಯ ತಂಗಿಯಾದ ರತ್ನಮ್ಮ ಎಂಬ ಇಬ್ಬರು ಮಕ್ಕಳಿರುತ್ತಾರೆ ಇವರಲ್ಲಿ ನಮ್ಮ ತಂದೆ ಮೃತರಾಗಿದ್ದು ನನ್ನ ತಾಯಿಯು ಸಹ ಮೃತರಾಗಿರುತ್ತಾರೆ ನಮ್ಮ ಅಜ್ಜಿಯ ಮರಣ ನಂತರ ಸದರಿ ಆಸ್ತಿಯ ಖಾತಾ ಬದಲಾವಣೆಗಾಗಿ ರತ್ನಮ್ಮ ಎಂಬ ನನ್ನ ತಂದೆಯ ತಂಗಿಯವರು ಮಾತ್ರ ಮನವಿ ಮಾಡಿಕೊಂಡಿರುತ್ತಾರೆ ಸದರಿ ಆಸ್ತಿಗೆ ನಾನು ಸಹ ಉತ್ತರ ವಾರಸುದಾರಳಿದ್ದು ಪೂರಕವಾಗಿ ನನ್ನ ಅಜ್ಜನ ವಂಶವೃಕ್ಷವನ್ನು ಸಹ ದಾಖಲೆಯಾಗಿ ಸಲ್ಲಿಸಿ ಹಕ್ಕು ಬದಲಾವಣೆಗೆ ತಕರಾರು ಅರ್ಜಿ ಸಲ್ಲಿಸಿರುತ್ತೇನೇ ಮೇಲ್ಕಂಡ ಜಮೀನು ಅಜ್ಜಿಯ ಆಸ್ತಿಯಾಗಿದ್ದು ಇದರಲ್ಲಿ ಸಮಪಾಲು ಬರಬೇಕಾಗಿರುತ್ತದೆ ನನ್ನ ತಂದೆ ನನ್ನ ಅಜ್ಜ-ಅಜ್ಜಿಗೆ ಗಂಡು ಸಂತಾನವಾಗಿದ್ದು ಸದರಿ ಜಮೀನು ನನ್ನ ತಂದೆಯ ಆಸ್ತಿಯಾಗಿರುವುದರಿಂದ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ವಾದಿ ಪ್ರತಿವಾದಿಗಳ ಹೇಳಿಕೆಗಳು ಸಂಮಜಸವಾಗಿಲ್ಲಾದ ಕಾರಣ ಸದರಿ ಜಮೀನು ಈ ಹಿಂದೆ ಪಹಣಿಯಲ್ಲಿ ಹೆಸರು ಇದ್ದಂತೆ ಯಾಥಸ್ಥಿತಿಯಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ.

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕೂರಿಗನೂರು ಗ್ರಾಮದ ಸರ್ವೇ ನಂಬರ್. 58/2 ವಿಸ್ತೀರ್ಣ 2.00 ಎಕರೆ ಜಮೀನು ಈ ಹಿಂದೆ ಪಹಣಿಯಲ್ಲಿ ಹೆಸರು ಇದ್ದಂತೆ ಯಾಥಸ್ಥಿತಿಯಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 19-08 -2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:
1.ವಾದಿ ಹಾಗೂ ಪ್ರತಿವಾದಿಗಳು.
2. [illegible]
3. ಕಛೇರಿ ಕಡತಕ್ಕೆ.